ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೊಂದನೆಯ ಅಧಿವೇಶನ
ಶುಕ್ರವಾರ, ದಿನಾಂಕ: 25ನೇ ಸೆಪ್ಟಂಬರ್, 2020

ನಾಡಪ್ರಭು ಕೆಂಪೇಗೌಡರ 500 ವರ್ಷದ ಕೋಟೆ ಶಿಥಿಲಗೊಂಡಿರುವ ಬಗ್ಗೆ

ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ):-

607 (744) ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಾಡಪ್ರಭು ಕೆಂಪೇಗೌಡರು ಮಾಗಡಿಯಲ್ಲಿ 500 ವರ್ಷಗಳ ಹಿಂದೆ ಕೋಟೆ ನಿರ್ಮಿಸಿದ್ದು, ಕೋಟೆಯು ಶಿಥಿಲಾವಸ್ಥೆಗೊಂಡಿರುವುದರಿಂದ ಈ ಕೋಟೆಗೆ ಪುರಾತತ್ವ ಇಲಾಖೆಯಿಂದ ಜೀರ್ಣೋದ್ಧಾರಕ್ಕಾಗಿ ನಿಗಧಿಯಾಗಿರುವ ಅನುದಾನ ಎಷ್ಟು; ಜೀರ್ಣೋದ್ಧಾರಕ್ಕಾಗಿ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;

(ಆ) ಕೋಟೆ ಜೀರ್ಣೋದ್ಧಾರಕ್ಕಾಗಿ ಈವರೆಗೂ ಎಷ್ಟು ಅನುದಾನ ವೆಚ್ಚವಾಗಿದೆ; ಉಳಿಕೆ ಅನುದಾನ ಎಷ್ಟು;

(ಇ) ಕೋಟೆಯ ಜೀರ್ಣೋದ್ಧಾರ ಅರ್ಧದಲ್ಲೇ ನಿಂತಿದ್ದು, ಕಾಮಗಾರಿ ಸ್ಥಗಿತಗೊಳಿಸಿರಲು ಕಾರಣವೇನು; ಕೋಟೆಯ ಜೀರ್ಣೋದ್ಧಾ೯ಪೂರ್ಣಗೊಳಿಸಲು ಇನ್ನೂ ಎಷ್ಟು ಸಮಯಾವಕಾಶ ಬೇಕು ? (ಸಂಪೂರ್ಣ ಮಾಹಿತಿ ನೀಡುವುದು)